## ಅವರು ಬೇಡ, ಅಳಿಸಿದ್ದಾರೆ!

ಮೊಮ್ಮಗನಿಗೆ ಕನ್ನಡ ಪಾಠ ಮಾಡುತ್ತಿದ್ದೆ. ವಿರುದ್ಧಾರ್ಥಕ ಪದಗಳನ್ನು ಹೇಳುವ ಸಂದರ್ಭದಲ್ಲಿ ಪುರಾತನ ಪದಕ್ಕೆ 'ನವೀನ' ಎಂಬ ಉತ್ತರ ಹೇಳಿಕೊಟ್ಟು, ಸುಲಭವಾಗಿ ಕಲಿಯಲೆಂದು 'ನಮ್ಮ ಡೆಂಟಲ್ ಡಾಕ್ಟ್ರರನ್ನು ನೆನಪಿಟ್ಟುಕೋ, ಅವರ ಹೆಸರು ನವೀನ್, ಎಷ್ಟು ಸುಲಭ ಅಲ್ವಾ' ಎಂದೆ.

ತಕ್ಷಣವೇ ಮುಖ ಕೆಂಪಗೆ ಮಾಡಿಕೊಂಡ ಮೊಮ್ಮಗ, 'ಅಜ್ಜಿ, ಅವರು ಬೇಡ, ನಿನ್ನ ಹಲ್ಲು ಕೀಳುವಾಗ ಅವರು ನಿನ್ನನ್ನು ಅಳಿಸಿದ್ದಾರೆ. ನಮ್ಮ ಪಿ.ಟಿ ಸರ್‌ನ ನೆನಪಿಸಿಕೊಳ್ತೀನಿ, ಅವರ ಹೆಸರೂ ನವೀನ್ ಎನ್ನಬೇಕೇ?' ಬೆಪ್ಪಾಗುವ ಸರದಿ ನನ್ನದಾಗಿತ್ತು.

**ಕೆ.ವಿ. ರಾಜಲಕ್ಷ್ಮಿ**





## ಅಮ್ಮ ಮಾಡಿದ ಹಾಗೆ...

ಅಂದು ನಿತ್ಯಾಳ ಮನೆಯಲ್ಲಿ ಸತ್ಯನಾರಾಯಣ ಪೂಜೆ. ಮನೆ ತುಂಬಾ ಜನ. ಸಂಜೆ ಎಲ್ಲರೂ ಟಿವಿಯಲ್ಲಿ ಧಾರಾವಾಹಿ ನೋಡುತ್ತಾ ಕುಳಿತಿದ್ದರು. ಧಾರಾವಾಹಿಯಲ್ಲಿ ಪತಿ ಕೋಪದಿಂದ ಪತ್ನಿಗೆ ಕಪಾಳಕ್ಕೆ ಬೀಸಿ ಹೊಡೆಯುತ್ತಾನೆ. ಪೆಟ್ಟು ತಿಂದ ಪತ್ನಿ ಅಳುತ್ತಾ ಕೋಣೆಗೆ ಹೋಗಿ ಬಾಗಿಲು ಹಾಕಿಕೊಳ್ಳುವ ದೃಶ್ಯ ಪ್ರಸಾರವಾಯಿತು.

ಟಿ.ವಿ ನೋಡುತ್ತಾ ಅಲ್ಲಿಯೇ ಕುಳಿತಿದ್ದ ನಿತ್ಯಾಳ ಮಗಳು ಶ್ರಾವಣಿ 'ಅಮ್ಮಾ, ಅವಳು ಸುಮ್ಮನಾಗಿದ್ದು ಯಾಕೆ? ನೀನು ಮಾಡೋ ಹಾಗೆ ಅಪ್ಪನ ಕೆನ್ನೆಗೆ ಬಾರಿಸಬಹುದಿತ್ತಲ್ಲ?' ಎಂದಾಗ ಎಲ್ಲರೂ ಗೊಳ್ಳೆಂದು ನಕ್ಕರು. ದೂರದಲ್ಲಿ ಕುಳಿತಿದ್ದ ಪತಿ ಮುಖ ಮುಚ್ಚಿಕೊಂಡ!

ಕಲೆ: ಗಣೇಶ ಆಚಾರ್ಯ

**ಕೆ. ಲೀಲಾ ಶ್ರೀನಿವಾಸ್**